## ಪ್ಯಾಂಟ್ ಶರ್ಟ್ ಜೊತೆಗೆ ಆಭರಣ

ಇದು ಎಲ್ಲಾ ಪುರುಷರಿಗೆ ನಿತ್ಯವೂ ಧರಿಸುವ ಬಟ್ಟೆಯ ಒಂದು ವಿಧ. ಈ ದಿರಿಸಿಗೆ ಸಿಂಪಲ್ ಒಂದು ಸರ ಅದಕ್ಕೆ ಒಪ್ಪುವ ಒಂದು ಪೆಂಡೆಂಟ್, ಒಂದೆರಡು ಬೆರಳಿಗೆ ಉಂಗುರ, ಅದೇ ರೀತಿ ಒಂದು ಬ್ರೇಸ್ಲೆಟ್ ಬೇಕು. ಬ್ರೇಸ್ಲೆಟ್ ತುಂಬಾ ಅಗಲದ್ದಾಗಿದ್ದರೆ ಹಗುರವಾಗಿರಲಿ. ಸಮಾರಂಭಕ್ಕೆ ಹೋಗುವಾಗ ಅಗಲದ ಕಣ್ಣಿಗೆ ಎದ್ದು ಕಾಣುವ ಬ್ರೇಸ್ಲೆಟ್ ಇರಲಿ. ಸರ ಧರಿಸುವುದಾದರೆ ಶರ್ಟ್‌ನ ಕುತ್ತಿಗೆಯ ಭಾಗದಲ್ಲಿ ಕಾಣುತ್ತಿರಲಿ, ಅದೊಂದು ವಿಭಿನ್ನ ಲುಕ್ ಕೊಡುತ್ತದೆ. ಶರ್ಟ್ ತಿಳಿ ಬಣ್ಣದ್ದಾಗಿದ್ದರೆ ಶರ್ಟ್‌ನ ಬಟನ್ ಹಾಕಿದ್ದಾಗಲೂ ಸರ ಗೋಚರವಾಗಿ ಚೆನ್ನಾಗಿ ಕಾಣುತ್ತದೆ. ಶರ್ಟ್‌ನ ತೋಳಿನ ಕಫ್‌ನ ಹೊರ ಭಾಗದಲ್ಲಿ ಬ್ರೇಸ್ಲೆಟ್ ಕಾಣುವಂತೆ ಗಮನಹರಿಸಿ.

### ಕಿವಿಗಳಿಗೆ ಸ್ಟಡ್!

ಕಿವಿಗೆ ಸ್ಟಡ್ ಹಾಕಿಕೊಳ್ಳುವುದು ಯುವಕರಿಗೆ ಇಷ್ಟವಾಗಿಬಿಟ್ಟಿದೆ. ಒಂದು ಕಿವಿಗೆ ಕೆಲವರು, ಎರಡೂ ಕಿವಿಗಳಿಗೆ ಇನ್ನು ಕೆಲವರು ಸ್ಟಡ್ ಹಾಕಿಕೊಂಡು ಖುಷಿಪಡುವುದು ಈಗಿನ ಟ್ರೆಂಡ್. ಉಂಗುರ, ಕಂಠೀಹಾರ ಹಾಕಿಕೊಳ್ಳುವ ಪುರುಷರೂ ಹೆಚ್ಚಿರುವ ಕಾರಣ ಈ ಆಭರಣಗಳಿಗೂ ಬೇಡಿಕೆ ಹೆಚ್ಚಿದೆ. ಬಂಗಾರ ಹಾಗೂ ಪ್ಲಾಟಿನಂ ನಡುವಿನ ದರದ ಅಂತರ ಕಾಲಕ್ರಮೇಣ ಕಡಿಮೆಯಾಗುತ್ತಾ ಬಂದಿದ್ದರಿಂದ, ಪ್ಲಾಟಿನಂ ಒಡವೆಗಳನ್ನು ಬಳಸುವ ಹುಡುಗರ ಸಂಖ್ಯೆ ವೃದ್ಧಿಸಿದೆ.



## ಪ್ಯಾಂಟ್- ಕುರ್ತಾಗೆ ಸರಿಹೊಂದುವ ಒಡವೆ


ರೆಡಿಮೇಡ್ ಕುರ್ತಾಗಳಲ್ಲಿ ಉದ್ದ ತೋಳು ಇರುತ್ತದೆ, ಆದರೆ ಕೈ ಕೆಳಗೆ ಸಡಿಲವಾಗಿರುತ್ತದೆ. ಕಫ್ ಇದ್ದಲ್ಲಿ ಸುಂದರವಾಗಿ ಕಾಣುತ್ತದೆ. ಅದನ್ನು ಸ್ವಲ್ಪ ಮಡಚಿ ಟೈಟ್ ಮಾಡಿ ನಂತರ ದಪ್ಪಗಿನ ಸರ, ರಿಂಗ್ ಬ್ರೇಸ್ಲೆಟ್, ಸ್ಕ್ವೇರ್ ವಿನ್ಯಾಸದ ಉಂಗುರ ಧರಿಸಿ. ಉದ್ದಗಿನ ಕುರ್ತಾ ಆದರೆ ಉದ್ದ ಹಾರ ಕೂಡ ಹಾಕಬಹುದು. ಶಾರ್ಟ್ ಕುರ್ತಾ ಆದರೆ ಸರ ಸಣ್ಣದಾಗಿರಲಿ. ಕೈಯ ಕೆಳಗೆ ಮಡಚಿ ಒಂದು ಬಟನ್ ಇದ್ದರೆ ಒಂದು ಹೊಸ ಲುಕ್ ಕೊಡುತ್ತದೆ. ಅದರ ಜೊತೆಗೆ ಆಭರಣವೂ ಮೆರುಗು ಹೆಚ್ಚಿಸುತ್ತದೆ. ವಾಚ್ ಅವರವರ ಇಷ್ಟದಂತೆ ಧರಿಸಬಹುದು. ಬ್ರೇಸ್ಲೆಟ್ ದೊಡ್ಡದಾಗಿದ್ದರೆ ಬೆಲ್ಟ್ ವಾಚ್ ಧರಿಸಿ.

## ಟೀ ಶರ್ಟ್ ಜೊತೆಗೆ ಆಭರಣ

ಈಗ ಟ್ರೆಂಡ್ ಎಂದರೆ ಟೀ ಶರ್ಟ್ ಧರಿಸಿದಾಗ ಸರ ಹಾಕಿಕೊಳ್ಳುವುದು. ರೌಂಡ್ ನೆಕ್ ಹಾಕಿದಾಗ ಹೊಳೆಯುವ ಸರ ಬಹಳ ಸುಂದರವಾಗಿ ಕಾಣುತ್ತದೆ. ಉಂಗುರ ಸ್ವಲ್ಪ ಸಿಂಪಲ್ ಆಗಿರಲಿ, ಬ್ರೇಸ್ಲೆಟ್ ಹಗುರದ್ದೇ ಆಗಿರಲಿ. ಸರಕ್ಕೆ ನಿಮಗಿಷ್ಟವಾದ ಪೆಂಡೆಂಟ್ ಧರಿಸಬಹುದು. ರೇಡಿಯೊ ಸರ, ಸ್ಕ್ವೇರ್ ಚೈನ್ ಯಾವುದಾದರೂ ಸರಿ.

## ಕಚ್ಚೆ ಶೈಲಿಯ ಪ್ಯಾಂಟ್ (ಧೋತಿ ಪ್ಯಾಂಟ್ ಮತ್ತು ಜುಬ್ಬ)

ಕಾಲರ್ ಇರುವ ಜುಬ್ಬ, ರೌಂಡ್ ನೆಕ್ ಜುಬ್ಬ, ಉದ್ದದ ಜುಬ್ಬ, ಗಿಡ್ಡನೆಯ ಜುಬ್ಬ... ಯಾವುದೇ ಇರಲಿ ತಿಳಿ ಬಿಳಿ ಬಣ್ಣ, ತಿಳಿ ಹಳದಿ, ಕ್ರೀಮ್ ಬಣ್ಣದ ಉಡುಪಿಗೆ ಚಿನ್ನದ ಆಭರಣ ಧರಿಸಿ.



ಉಂಗುರ ಮತ್ತು ಪೆಂಡೆಂಟ್‌ನಲ್ಲಿ ಹರಳುಗಳು ಇರಲಿ. ಕಿವಿಯೋಲೆ ಚಿನ್ನದ್ದು ಇರಲಿ. ಬಣ್ಣದ ಜುಬ್ಬ ಆದರೆ ಬಿಳಿ ಹರಳಿನ ಕಿವಿಯೋಲೆ, ಹವಳದ ಮಣಿಗೆ ಚಿನ್ನದ ಬೆಸುಗೆ/ಕವರ್ ಇದ್ದ ಪೆಂಡೆಂಟ್ ಬಹಳ ಚೆನ್ನಾಗಿ ಒಪ್ಪುತ್ತದೆ. ಪುರುಷರು ಎಲ್ಲಾ ಆಭರಣ ಮ್ಯಾಚ್ ಮಾಡಬೇಕೆಂದಿಲ್ಲ. ಸರ ಮತ್ತು ಬ್ರೇಸ್ಲೆಟ್ ಹೊಂದಿಕೊಂಡರೆ ಸಾಕು. ಉಳಿದದ್ದು ಅವರವರ ಅಭಿರುಚಿಯಂತೆ ಧರಿಸಬಹುದು.

## ದಿರಿಸಿನ ಮೇಲೆ ಕೋಟ್ ಮತ್ತು ಆಭರಣ



ಯಾವುದೇ ದಿರಿಸು ಆಗಲಿ ಶರ್ಟ್, ಕುರ್ತಾ, ಜುಬ್ಬ ಅದರ ಮೇಲೆ ಹಾಫ್ ಕೋಟ್ ಧರಿಸುವುದು ಈಗ ಫ್ಯಾಷನ್. ಕಚ್ಚೆ, ಲೂಸ್ ಪ್ಯಾಂಟ್, ಧೋತಿ ಪ್ಯಾಂಟ್, ಪಂಚೆಯನ್ನು ಕಚ್ಚೆಯ ರೂಪದಲ್ಲಿ ಧರಿಸಿ ಕೂಡ ಕೋಟ್ ಧರಿಸುತ್ತಾರೆ. ಈ ತರದ ದಿರಿಸಿಗೆ ಅದಕ್ಕೊಪ್ಪುವ ಕಿವಿಯೋಲೆ ಧರಿಸಬಹುದು. ಕಿವಿಯೋಲೆ ರಿಂಗ್ ವಿನ್ಯಾಸ, ಸ್ಟಾರ್ ವಿನ್ಯಾಸ, ಗುಂಡು ವಿನ್ಯಾಸದ್ದು ಆಗಿದ್ದರೆ ಸಖತ್ ಲುಕ್ ಕೊಡುತ್ತದೆ. ಉಂಗುರ ದೊಡ್ಡದಾಗಿರುವುದು, ಹರಳು ಪೋಣಿಸಿದ್ದು, ಪವಿತ್ರ ಉಂಗುರ ಈ ತರಹದ ಚಂದ ಕಾಣುವ ಉಂಗುರ ಧರಿಸಬಹುದು. ಬ್ರೇಸ್ಲೆಟ್ ಮತ್ತು ಸರ ದಪ್ಪಗಿನದ್ದು, ಹಗುರವಾಗಿದ್ದರೆ ಚೆನ್ನಾಗಿರುತ್ತದೆ. ಎರಡು ಮೂರು ಸರ ಧರಿಸುವುದು ಈಗ ಫ್ಯಾಷನ್ ಆಗಿದೆ. ಬಂಗಾರದ ಬೆಲೆ ಏರುತ್ತಿದೆ. ಆದರೂ ಉಡುಪಿಗೆ ತಕ್ಕ ಚಿನ್ನದೊಡವೆ ಧರಿಸಿದರೆ ಫ್ಯಾಷನ್ ಜೊತೆಗೆ ಅಂದವಾಗಿಯೂ ಕಾಣಬಹುದು. ಚಿನ್ನದಾಭರಣದ ಬಾಳಿಕೆಯೂ ಅಧಿಕ. ಜೀವನಕ್ಕೆ ಆಧಾರವು ಹೌದು. ಆದ್ದರಿಂದ ಆದಷ್ಟು ಶರೀರ ಚರ್ಮಕ್ಕೆ ಹಿತವಾಗಿ ನಕಾರಾತ್ಮಕ ಶಕ್ತಿಯನ್ನು ಓಡಿಸುವ ಲೋಹವನ್ನು ದೇಹಕ್ಕೆ ಧರಿಸಿ, ಆರೋಗ್ಯ ಕಾಪಾಡಿಕೊಳ್ಳಿ. ■